No.M1/MNG/CR-6/2009-10

Office of the
Deputy Conservator of Forests,
Bellary Division, Bellary
Date:19.02.2016

To,
Sri D.Ramesh,
City Press Compound,
Bellary.

Sir,

Sub : Diversion of 6.35 ha of forest land in favour of Sri D.Ramesh, Bellary R.M.Block forest of Sandur North Range, Sandur Taluk, Bellary district.

Ref : Your online proposal No. FP/KA/MIN/15687/2015 Dated: 30.09.2015 and letter Dated: 01.01.2016.

* * * * *

With refence to above subject and reference on verification of your proposal submitted to this office, your proposal is incomplete and certain clarifications and documents are requested from the office of the Director, Department of Mines and Geology, Bangalore in this regard.

As, your proposal being incomplete, it will be processed after receipt of clarification / documents from the Director, Department of Mines and Geology, Bangalore.

Yours faithfully

Sd/-
Deputy Conservator of Forests,
Bellary Division, Bellary.

1) Copy submitted Additional Principal Chief Conservator of Forests (FC), Bangalore for kind information.
2) Copy submitted to Chief Conservator of Forests, Bellary Circle, Bellary for kind information.

Deputy Conservator of Forests,
Bellary Division, Bellary.

ರವಾನಿಸಲಾಗಿದೆ.
ದಿನಾಂಕ 22/02/2016
ಸಹಿ



Print to PDF without this message by purchasing novaPDF (http://www.novapdf.com/)

ಸಂಖ್ಯೆ : ಎಂ01/ಎಂಎನ್‌ಜಿ/ಸಿಆರ್–26/2009–10

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಬಳ್ಳಾರಿ ವಿಭಾಗ, ಬಳ್ಳಾರಿ.
ದಿನಾಂಕ : 20–02–2016

ಇವರಿಗೆ,
ನಿರ್ದೇಶಕರು,
ಗಣಿ ಮತ್ತು ಭೂ ವಿಜ್ಞಾನ ಇಲಾಖೆ,
ಖನಿಜ ಭವನ, ರೇಸ್ ಕೋರ್ಸ್ ರಸ್ತೆ,
ಬೆಂಗಳೂರು.

ಮಾನ್ಯರೆ,

ವಿಷಯ : ಶ್ರೀ ಡಿ.ರಮೇಶ್, ಬಳ್ಳಾರಿ ಇವರಿಗೆ ರಾಮಗಡ ಬ್ಲಾಕ್ ಅರಣ್ಯ ಪ್ರದೇಶದಲ್ಲಿ ಗಣಿಗುತ್ತಿಗೆ ಮಂಜೂರು ಮಾಡಿರುವ ಕುರಿತು.

ಉಲ್ಲೇಖ : 1) ಸರ್ಕಾರದ ಅಧೀನ ಕಾರ್ಯದರ್ಶಿ (ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ : ಸಿಐ/03/ಎಂಎಂಎಂ/2005(ಭಾಗ) ದಿನಾಂಕ:16–4–2010.
2) ತಮ್ಮ ಕಛೇರಿ ಪತ್ರ ಸಂಖ್ಯೆ : ಗಭೂಇ/ಗಗುಶಾ/238ಎಎಂಎಲ್97/2010–11/9988 ದಿನಾಂಕ:ಇಲ್ಲ
3) ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ/62/ಎಂಎಂಎಂ/2011 ದಿ : 19–3–2011.

* * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಡಿ.ರಮೇಶ್, ಬಳ್ಳಾರಿ ಇವರು ಬಳ್ಳಾರಿ ವಿಭಾಗದ ಸಂಡೂರು ಉತ್ತರ ವಲಯದ ರಾಮಗಡ ಬ್ಲಾಕ್ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆಗಾಗಿ ಅರಣ್ಯ ಸಂರಕ್ಷಣಾ ಕಾಯ್ದೆ, 1980 ರ ಸೆಕ್ಷನ್–2 ರಡಿಯಲ್ಲಿ ಮಂಜೂರಾತಿಗಾಗಿ ಆನ್‌ಲೈನ್ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಎಂಎಂಡಿಆರ್ ಅಧಿನಿಯಮ ತಿದ್ದುಪಡಿ–2015 ರ ಪ್ರಕಾರ ಶ್ರೀ ಡಿ.ರಮೇಶ್, ಬಳ್ಳಾರಿ ಇವರ ಪ್ರಸ್ತಾವನೆಯನ್ನು ಯಾವ ರೀತಿ ಪರಿಗಣಿಸಬೇಕು ಎಂಬುದರ ಬಗ್ಗೆ ಸ್ಪಷ್ಟನೆ ನೀಡಲು ಕೋರಿದೆ. ಅಲ್ಲದೆ ಪ್ರಸ್ತಾವನೆಯ ಕುರಿತು ಈ ಕೆಳಕಂಡ ಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

1) ಸರ್ಕಾರದ ಅಧಿಸೂಚನೆ ದಿನಾಂಕ : 27–03–2008 ರಲ್ಲಿ ರಾಮಗಡ ಬ್ಲಾಕ್‌ನ 93.18 ಹೆಕ್ಟರ್ ಪ್ರದೇಶವನ್ನು **"ಕಂದಾಯ ಭೂಮಿ"**ಯೆಂದು ಪರಿಗಣಿಸಿ ಗಣಿಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಆದರೆ ಅದು ಅರಣ್ಯ ಪ್ರದೇಶವಾಗಿರುತ್ತದೆ. **(ಪ್ರತಿ ಲಗತ್ತಿಸಿದೆ)**
2) ಕೇಂದ್ರ ಸರ್ಕಾರದ ಪತ್ರ ದಿನಾಂಕ : 03–06–2008 ನ್ನು ಉಲ್ಲೇಖಿಸಿ ಸಂಡೂರು ತಾಲೂಕಿನ ರಾಮಗಡ ಗ್ರಾಮದ ಅರಣ್ಯ ಪ್ರದೇಶದ 93.18 ಹೆಕ್ಟರ್ ಪ್ರದೇಶದೊಳಗೆ ಶ್ರೀ ಡಿ. ರಮೇಶ, ಬಳ್ಳಾರಿ ಇವರಿಗೆ 14.15 ಎಕರೆ ಪ್ರದೇಶವನ್ನು ಗಣಿಗಾರಿಕೆಗಾಗಿ ಎಂ.ಎಂ.ಡಿ.ಆರ್–1957 ಅನ್ವಯ ತಾತ್ವಿಕ (In-principal) ಅನುಮೋದನೆಯನ್ನು ದಿನಾಂಕ:16–04–2010 ರಂದು ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯು ನೀಡಿರುತ್ತದೆ. **(ಪ್ರತಿ ಲಗತ್ತಿಸಿದೆ)**
3) ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯು ಈ ಹಿಂದೆ ದಿನಾಂಕ : 27–03–2008 ರಲ್ಲಿ ಕಂದಾಯ ಭೂಮಿಯೆಂದು ಪರಿಗಣಿಸಿ ಎಂ.ಎಂ.ಡಿ.ಆರ್ ಅಧಿನಿಯಮ–1957 ಕಲಂ 59(1) ರಡಿ 93.18 ಹೆಕ್ಟರ್‌ಗೆ ನೀಡಿದ ಅಧಿಸೂಚನೆಯ ದಿನಾಂಕ:19–03–2011 ರಲ್ಲಿ ರದ್ದುಪಡಿಸಿರುತ್ತದೆ. **(ಪ್ರತಿ ಲಗತ್ತಿಸಿದೆ)**
4) ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿ.ಪಿ. ಸಂಖ್ಯೆ : 562/2009 ರ ತೀರ್ಪಿನಲ್ಲಿ ಮೇಲ್ಕಂಡ ಪ್ರದೇಶದಲ್ಲಿನ ಎಲ್ಲಾ ಗಣಿಗುತ್ತಿಗೆಗಳನ್ನು ರದ್ದುಪಡಿಸಿರುತ್ತದೆ.
5) ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರ ಪತ್ರಗಳ ದಿನಾಂಕ:23–3–2011 ರಲ್ಲಿ 93.18 ಹೆಕ್ಟರ್ ಪ್ರದೇಶದಲ್ಲಿ ಬರುವ ಗಣಿಗುತ್ತಿಗೆಗಳನ್ನು ರದ್ದು ಪಡಿಸಲು ತಮ್ಮ ಕಛೇರಿಗೆ ಶಿಫಾರಸ್ಸು ಮಾಡಿರುತ್ತಾರೆ ಹಾಗೂ ಈ ಕುರಿತು NOC ಗಳನ್ನು ಹಿಂಪಡೆದಿರುವುದಾಗಿ ಕಂದಾಯ ಇಲಾಖೆಯು ಸಚಿವಾಲಯಕ್ಕೆ ಪತ್ರ ಬರೆದಿರುತ್ತಾರೆ. **(ಪ್ರತಿ ಲಗತ್ತಿಸಿದೆ)**

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದಾಗ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರು ಗಣಿಗಾರಿಕೆ ಮಂಜೂರಾತಿ ನೀಡಬಾರದೆಂದು ಹಾಗೂ NOC ಗಳನ್ನು ಹಿಂಪಡೆದ ನಂತರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಹಾಗೂ ಅಧಿಸೂಚನೆ ದಿನಾಂಕ: 19–03–2011 ಮುಂಚೆ ಅಂದರೆ ದಿನಾಂಕ:16–04–2010 ರಲ್ಲಿ ಶ್ರೀ ಡಿ. ರಮೇಶ್ ಇವರಿಗೆ



Print to PDF without this message by purchasing novaPDF (http://www.novapdf.com/)

ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯು ತಾತ್ವಿಕ ಅನುಮೋದನೆ ನೀಡಿರುತ್ತದೆ. ಇದು ಎಂಎಂಆರ್‌ಡಿ ಅಧಿನಿಯಮ ತಿದ್ದುಪಡಿ 2015 ರ ಪ್ರಕಾರ ತಾತ್ವಿಕ ಅನುಮೋದನೆ ಹೇಗೆ ಊರ್ಜಿತ ಎಂಬುದನ್ನು ಸ್ಪಷ್ಟಕರಿಸಲು ಕೋರಿದೆ.

6) ಶ್ರೀ ಡಿ.ರಮೇಶ್, ಬಳ್ಳಾರಿ ಇವರು ಸಲ್ಲಿಸಿರುವ ಪ್ರಸ್ತಾವನೆಯಲ್ಲಿನ ಝೆರಾಕ್ಸ್ ನಕಾಶೆಯನ್ನು (ನಕಾಶೆಯನ್ನು ಗಣಿ ಮತ್ತು ಭೂ ವಿಜ್ಞಾ ಇಲಾಖೆಯಿಂದ ದೃಢಿಕರಿಸಿರುವುದಿಲ್ಲ) ಪರಿಶೀಲಿಸಿಲಾಗಿ ಪ್ರಸ್ತಾಪಿತ ಪ್ರದೇಶ ಶ್ರೀ ಜೆ.ಎಂ. ವೃಷಬೇಂದ್ರಯ್ಯ ಎಂ.ಎಲ್.ನಂ.2173 ಗಣಿಗುತ್ತಿಗೆ ಸಿ ಕೆಟಗರಿ ಮೈನ್ಸ್ ಮತ್ತು ರಾಯಲ್ ಗೆಸ್ಟ್ ಪ್ರದೇಶಕ್ಕೆ ಅತಿ ವ್ಯಾಪ್ತಿಯಾಗುತ್ತದೆ. **(ಪ್ರತಿ ಲಗತ್ತಿಸಿದೆ)**

7) ಸದರಿಯವರ ಪ್ರಸ್ತಾಪಿತ ಪ್ರದೇಶವನ್ನು ಸಿಇಸಿ ಜಂಟಿ ಮೋಜಣಿ ತಂಡದವರು ಮೋಜಣಿ ಮಾಡಿ ಡಿಜಿಪಿಎಸ್ ರೀಡಿಂಗ್ ನೀಡಿರುವುದಿಲ್ಲ. ಇದರಿಂದ ಪ್ರಸ್ತಾಪಿತ ಪ್ರದೇಶದ ಗಡಿರೇಖೆಗಳನ್ನು ಗುರುತಿಸಲು ಸಾಧ್ಯವಾಗುತ್ತಿರುವುದಿಲ್ಲ.

8) ರಾಮಗಡ ಬ್ಲಾಕ್ ಅರಣ್ಯ ಪ್ರದೇಶವನ್ನು ಕರ್ನಾಟಕ ಅರಣ್ಯ ಅಧಿನಿಯಮ–1963 ಕಲಂ–5 ರಡಿ ಪ್ರಕ್ರಿಯೆ ಮುಗಿಸಿ ಅಂತಿಮ ಆದೇಶ ನೀಡಿದ್ದು, ಈ ಆದೇಶದ ಪ್ರಕಾರ ಶ್ರೀ ಡಿ. ರಮೇಶ್ ಇವರ ಅರ್ಜಿ ಸಲ್ಲಿಸಿದ ಪ್ರದೇಶದಲ್ಲಿ ಬಿಷಪ್ ಕ್ಯಾಥಲಿಕ್ ಡಯಾಸಿಸ್ ಮತ್ತು ರಾಯಲ್ ರೆಸ್ಟ್ ಹೌಸ್ ಇವರಿಗೆ ಕೆಲವೊಂದು ವಿಸ್ತೀರ್ಣಕ್ಕೆ ಹಕ್ಕುಗಳನ್ನು ನೀಡಿರುತ್ತಾರೆ. ಇದನ್ನು ಪರಿಶೀಲನೆ ಮಾಡಬೇಕಾಗಿರುತ್ತದೆ.

ಅತಿವ್ಯಾಪ್ತಿಯಾಗುವ ಪ್ರದೇಶವನ್ನು ಸಿ ಇ ಸಿ ಯವರ ಶ್ರೀ ಜೆ.ಎಂ. ವೃಷಬೇಂದ್ರಯ್ಯ ಎಂ.ಎಲ್.ನಂ.2173 ಗಣಿಗುತ್ತಿಗೆ ಸಿ ಕೆಟಗರಿ ಮೈನ್ಸ್ ಇವರಿಗೆ ನೀಡಿರುವ ನಕಾಶೆಯೊಂದಿಗೆ ಶ್ರೀ ಡಿ ರಮೇಶರವರು ಸಲ್ಲಿಸಿರುವ ನಕಾಶೆಯೊಂದಿಗೆ ತಾಳೆ ಮಾಡಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ ಶ್ರೀ ಡಿ.ರಮೇಶ ಇವರಿಗೆ ದಿನಾಂಕ:16–04–2010 ರಂದು ನಿಡಿರುವ ತಾತ್ವಿಕ ಅನುಮೋದನೆ ಸರಿಯಿದೆಯೇ ಎಂಬುದರ ಬಗ್ಗೆ ಸ್ಪಷ್ಟ ಅಭಿಪ್ರಾಯ ನೀಡಲು ಕೋರಲಾಗಿದೆ. ಇಲ್ಲವಾದಲ್ಲಿ ಎಂಎಂಡಿಆರ್ ಅಧಿನಿಯಮ ತಿದ್ದುಪಡಿ–2015 ರ ಪ್ರಕಾರ ಪರಿಷ್ಕೃತ ತಾತ್ವಿಕ (In-principal) ಅನುಮೋದನೆಯನ್ನು ನೀಡಲು ಕೋರಲಾಗಿದೆ. ಹಾಗೂ ಶ್ರೀ ಡಿ.ರಮೇಶ ಇವರು ಪ್ರಸ್ತಾಪಿಸಿರುವ ಪ್ರದೇಶದ ಡಿಜಿಪಿಎಸ್ (DGPS) ರೀಡಿಂಗ್ ದತ್ತಾಂಶ ಇರುವ ನಕಾಶೆಯನ್ನು ನೀಡಲು ಕೋರಲಾಗಿದೆ.

ತಮ್ಮ ವಿಶ್ವಾಸಿ

ಸಹಿ/–

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬಳ್ಳಾರಿ ವಿಭಾಗ, ಬಳ್ಳಾರಿ.

1) ಪ್ರತಿಯನ್ನು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ), ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2) ಪ್ರತಿಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವೃತ್ತ, ಬಳ್ಳಾರಿ ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3) ಪ್ರತಿಯನ್ನು ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರ ಮಾಹಿತಿಗಾತಿಗಾಗಿ ಸಲ್ಲಿಸಲಾಗಿದೆ.
4) ಪ್ರತಿಯನ್ನು ಉಪ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಹೊಸಪೇಟೆ ಇವರ ಮಾಹಿತಿಗಾಗಿ ಕಳುಹಿಸಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬಳ್ಳಾರಿ ವಿಭಾಗ, ಬಳ್ಳಾರಿ.

ರವಾನಿಸಲಾಗಿದೆ.
ದಿನಾಂಕ 23/02/2016



Print to PDF without this message by purchasing novaPDF (http://www.novapdf.com/)